ಏಪ್ರಿಲ್-2022

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೇ

# ಸ್ವಚ್ಛತಾವಾಣಿ

ವಾರ್ತಾಪತ್ರ

ಜಲೋತ್ಸವ ಮನೆ ಮನೆಗೆ ಗಂಗೆ | Har Ghar Jal Jal Jeevan Mission

## "Sujlam 2.0"



ಪ್ರಸ್ತುತ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ **ಹಂತ-2** ಜಾರಿಯಲ್ಲಿದ್ದು, ಬಯಲು ಬಹಿರ್ದೆಸೆ ಮುಕ್ತ ಸುಸ್ಥಿರತೆಯನ್ನು ಕಾಪಾಡಲು ODF Plus ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿರುವ ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲಶಕ್ತಿ ಮಂತ್ರಾಲಯ ಭಾರತ ಸರ್ಕಾರವು 100% FHTC ಆಗಿರುವ ಗ್ರಾಮಗಳಲ್ಲಿ ದ್ರವ ಮತ್ತು ಘನ ತ್ಯಾಜ್ಯ ನಿರ್ವಹಣೆಗೆ ಒತ್ತು ನೀಡುವ ಉದ್ದೇಶದಿಂದ ಹಾಗೂ ಸಾರ್ವಜನಿಕ ಕಟ್ಟಡಗಳಲ್ಲಿ ದ್ರವ ತ್ಯಾಜ್ಯ ನಿರ್ವಹಣೆಗೆ ವ್ಯವಸ್ಥೆ ಮತ್ತು ಎಲ್ಲಾ ನೂತನ ಕಟ್ಟಡಗಳಲ್ಲಿ ಶೌಚಾಲಯ ನಿರ್ಮಾಣ/ರೆಟ್ರೋ ಫಿಟ್ಟಿಂಗ್ ಸೇರಿದಂತೆ ಅಂತರ್ಜಲ ಹೆಚ್ಚಳಕ್ಕೆ ಕ್ರಮ ವಹಿಸುವ ಮೂಲ ಉದ್ದೇಶವನ್ನಿಟ್ಟುಕೊಂಡು **Sujlam 2.0** ಹೆಸರಿನ 100 ದಿನಗಳ ವಿಶೇಷ ಆಂದೋಲನವನ್ನು 22ನೇ ಮಾರ್ಚ್ 2022 ರಿಂದ 30ನೇ ಜೂನ್ 2022 ರವರೆಗೆ ಆಯೋಜಿಸಿದೆ. ದೇಶಾದ್ಯಂತ ಏಕ ಕಾಲದಲ್ಲಿ ಈ ಆಂದೋಲನ ಹಮ್ಮಿಕೊಳ್ಳಲಾಗಿದೆ.





## "ಅಧ್ಯಯನ ಪ್ರವಾಸ"



ಉಪ ಕಾರ್ಯದರ್ಶಿ(ಅಭಿವೃದ್ಧಿ) ರವರ ನೇತೃತ್ವದ 4 ಜನರ ತಂಡವು 19 ಮತ್ತು 20ನೇ ಏಪ್ರಿಲ್-2022 ರಂದು ಗುಜರಾತಿನ **Zakariyapura cluster** ಮತ್ತು **Banaskhantha** ನಲ್ಲಿರುವ ಮಾದರಿ ಜೈವಿಕ ಅನಿಲ ಘಟಕ ಮತ್ತು **Bio CNG Plant** ಗೆ ಭೇಟಿ ನೀಡಿತು. ಅಧ್ಯಯನ ಪ್ರವಾಸಕ್ಕೆ ತೆರಳಿದ ತಂಡಕ್ಕೆ ಗುಜರಾತಿನ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ Mission Director ನೇತೃತ್ವದ ತಂಡ ಈ ಎರಡು ಮಾದರಿ ಜೈವಿಕ ಅನಿಲ ಘಟಕಗಳ ಕಾರ್ಯ ಚಟುವಟಿಕೆಗಳನ್ನು ಬಗ್ಗೆ ಮಾಹಿತಿ ನೀಡುವ ಜೊತೆ ಇವುಗಳ ಕಾರ್ಯಚಟುವಟಿಕೆಗಳನ್ನು ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಕ್ಷೇತ್ರ ಭೇಟಿಗೆ ಕರೆದೊಯ್ಯಲಾಯಿತು. ಬಳಿಕ ಆನಂದ ಜಿಲ್ಲೆಯಲ್ಲಿನ ಅಮೂಲ್ ಡೈರಿಗೆ ಭೇಟಿ ನೀಡಿ ಇಲ್ಲಿನ ಜೈವಿಕ ಅನಿಲ ಘಟಕದ ಕಾರ್ಯ ವೈಖರಿಯ ಬಗ್ಗೆಯೂ ರಾಜ್ಯ ತಂಡ ಮಾಹಿತಿ ಕಲೆ ಹಾಕಿತು.









## ತರಬೇತಿ ಕಾರ್ಯಕ್ರಮಗಳು

### "SBCC ತರಬೇತಿ ಕಾರ್ಯಾಗಾರ"




ನೀರು ಮತ್ತು ನೈರ್ಮಲ್ಯ ವಿಷಯಕ್ಕೆ ಸಂಬಂಧಿಸಿದಂತೆ, ಸಾಮಾಜಿಕ ನಡತೆಯ ಬದಲಾವಣೆಯಲ್ಲಿ ಸಂವಹನ ವಿಷಯ ಕುರಿತು **ಯುನಿಸೆಫ್** ಸಹಯೋಗದೊಂದಿಗೆ **National Institute of Rural Development and Panchayath Raj** ಇಲಾಖೆ ಆಯೋಜಿಸಿದ್ದ 2 ದಿನಗಳ ತರಬೇತಿ ಕಾರ್ಯಾಗಾರವು **National Institute of Rural Development and Panchayath Raj, Hyderabad** ನಲ್ಲಿ 27 ಮತ್ತು 28ನೇ ಏಪ್ರಿಲ್-2022 ರಂದು ನಡೆಯಿತು. ಈ ಎರಡು ದಿನಗಳ ತರಬೇತಿ ಕಾರ್ಯಕ್ರಮಕ್ಕೆ ರಾಜ್ಯದಿಂದ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ ರಾಜ್ಯ ಸಮಾಲೋಚಕರುಗಳು ಮತ್ತು ಹೈದರಾಬಾದ್ ಕರ್ನಾಟಕದ 7 ಜಿಲ್ಲೆಗಳ ಐ.ಇ.ಸಿ ಮತ್ತು ಹೆಚ್.ಆರ್.ಡಿ ಸಮಾಲೋಚಕರು ಭಾಗವಹಿಸಿದ್ದರು. ಇದಿಷ್ಟೇ ಅಲ್ಲದೆ ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಿಂದಲೂ ಆಯ್ದ ಸಮಾಲೋಚಕರುಗಳು ಮತ್ತು ಅಧಿಕಾರಿಗಳು ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.







**ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದಲ್ಲಿ ಕರೆ ಮಾಡಿ 9480985555**

ನಮ್ಮನ್ನು ಹಿಂಬಾಲಿಸಿ : swachhamevajayate.org rdpr.karnataka.gov.in